ಸಂದರ್ಭದಲ್ಲಿ ತಮ್ಮಲ್ಲಿ ಬೇಡುತ್ತೇನೆ. ಅದೇ ರೀತಿಯಲ್ಲಿ ಪ್ರಜಾಮತದ ಸಂಪಾದಕರಾಗಿದ್ದ ಶ್ರೀಮಾನ್ ಹ.ಮೆ. ನಾಗರಾಜರಾವ್‌ರವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಸೇವೆಯನ್ನು ಮಾಡಿದ್ದಾರೆ. ಅವರು ಸಹ ನಮ್ಮನ್ನು ಅಗಲಿದ್ದಾರೆ ಅವರ ಹೆಸರನ್ನು ಇದರಲ್ಲಿ ಸೇರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ ಅವರ ಆತ್ಮಕ್ಕೂ ಶಾಂತಿಯನ್ನು ಕೋರಿ ಇನ್ನು ನಮ್ಮ ಪಕ್ಷದಲ್ಲಿದ್ದಂತಹ ಸನ್ಮಾನ್ಯ ಕಲ್ಯಾಣರಾವ್ ಮೊಳಕೇರಿಯವರು ಆಕಸ್ಮಿಕವಾಗಿ ನಿಧನರಾದರು. ಅವರ ನಿಧನರಾದ ನಂತರ ನಾನು ಬೀದರ್‌ಗೆ ಹೋಗಿದ್ದೆ ಅವರ ಪತ್ನಿಯ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವರು ಕೊಳಚೆ ಪ್ರದೇಶದಲ್ಲಿ ಒಂದು ಸಣ್ಣದಾದ ಅಂದರೆ 15 × 20 ಅಡಿ ಜಾಗದಲ್ಲಿ ಒಂದು ಸಣ್ಣ ಮನೆ ಕಟ್ಟಿಸಿದ್ದಾರೆ ಅದಕ್ಕೆ ಗಾರೆ ಕೂಡ ಹಾಕಿಸಿಲ್ಲ. ಅವರು ಬಹಳ ಕಷ್ಟದಲ್ಲಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಒತ್ತಾಯ ಮಾಡತಕ್ಕಂಥಾದ್ದೇನೆಂದರೆ, ಅವರಿಗೆ ಪರಿಹಾರ ಕೊಡತಕ್ಕಂಥಾದ್ದರಲ್ಲಿ ಕಾನೂನು ದೃಷ್ಟಿಯಿಂದ ಅಡಚಣೆ ಬರಬಹುದು. ಅವರ ಹೆಂಡತಿಯವರಿಗೆ ಅಥವಾ ಅವರ ಸಂಬಂಧಿಕರಿಗೆ ಜಮೀನು ಕೂಡಾ ಇಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಕಳೆದ 22–23 ವರ್ಷಗಳಿಂದ ಜನಪರ ಹೋರಾಟಗಳಲ್ಲಿ ಭಾಗವಹಿಸಿಕೊಂಡು ಬಂದವರು. ಅವರು ವೈಯಕ್ತಿಕವಾಗಿ ಜೀವನದ ಕಡೆ ಗಮನ ಕೊಟ್ಟಿರಲಿಲ್ಲ. ಆ ಕಾರಣದಿಂದ ನಾನು ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ, ಅವರ ಕುಟುಂಬ ವರ್ಗದವರಿಗೆ ಸರ್ಕಾರ ಉದ್ಯೋಗವನ್ನು ಬೀದರ್‌ನಲ್ಲೇ ತಕ್ಷಣ ಮಾಡಿಸಬಹುದು. ತಾವು ಅದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೆ ಸಾಹಿತ್ಯ ಲೋಕದ ದಿಗ್ಗಜರಾಗಿದ್ದ ವಿನಾಯಕ ಕೃಷ್ಣ ಗೋಕಾಕ್‌ರವರು ಕನ್ನಡ ಸಾಹಿತ್ಯ ಮತ್ತು ಮರಾಠಿ ಸಾಹಿತ್ಯ ಲೋಕಕ್ಕೆ ಮಾಡಿರತಕ್ಕಂಥ ಸೇವೆ ಬಹಳ ಅಪಾರವಾದುದಾಗಿದೆ. ಮಾನ್ಯ ಗೋಕಾಕ್‌ರವರನ್ನು ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಒಂದೂವರೆ ವರ್ಷಗಳ ಹಿಂದೆ ಪ್ರಯತ್ನ ನಡೆದಿತ್ತು. ಕೆಲವು ರಾಜಕಾರಣಿಗಳ ಎಳೆದಾಟದಿಂದ ಅದು ಆಗಲಿಲ್ಲ. ಕೆಲವು ಮರಾಠಿ ಭಾಷೆಯ ಸಾಹಿತಿಗಳೇ ಅವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹೇಳಿದ್ದರು. ಆದರೆ ಅದು ಆಗದೇ ಇದ್ದುದು ದುರ್ದೈವದ ಸಂಗತಿಯಾಗಿದೆ. ಮಾನ್ಯ ಗೋಕಾಕ್‌ರವರು ಎರಡೂ ಭಾಷೆಗಳಲ್ಲಿ ಮಾಡಿರತಕ್ಕಂಥ ಅಪಾರವಾದ ಸಾಧನೆಯನ್ನು ಸನ್ಮಾನಿಸಿಕೊಳ್ಳಬೇಕಾದರೆ ನಮ್ಮ ರಾಜ್ಯದಲ್ಲಿ ಒಂದು ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಇಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡಿ ತಮ್ಮ ಜೊತೆಗೆ ಸಂತಾಪ ಸೂಚಕ ನಿರ್ಣಯಕ್ಕೆ ಬೆಂಬಲ ಸೂಚಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಅಗಲಿದ ಎಲ್ಲಾ ಮಹನೀಯರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನಾಚರಣೆ ಮಾಡಬೇಕೆಂದು ತಿಳಿಸುತ್ತೇನೆ.

(ಅಗಲಿದ ಮಾನ್ಯರುಗಳ ಗೌರವಾರ್ಥ ಸಭೆಯು ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನಾಚರಣೆಯನ್ನು ಮಾಡಿತು.)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ,
ಅಧ್ಯಕ್ಷರು ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 8ನೇ ಜೂನ್, 1992ರಂದು ನಡೆದ ಉಪ ಚುನಾವಣೆಯಲ್ಲಿ ಕುಣಿಗಲ್, ಗದಗ್ ಹಾಗೂ ಬೆಳಗಾಂ ವಿಧಾನಸಭಾ ಕ್ಷೇತ್ರಗಳಿಂದ 9ನೇ ವಿಧಾನಸಭೆಗೆ ಅನುಕ್ರಮವಾಗಿ ಸದಸ್ಯರಾಗಿ ಆಯ್ಕೆಯಾಗಿರುವ ಶ್ರೀಯುತರುಗಳಾದ ಮಾನ್ಯ ವೈ.ಕೆ. ರಾಮಯ್ಯ, ಮಾನ್ಯ ಬಿ.ಆರ್. ಪಾಟೀಲ್ ಹಾಗೂ ಮಾನ್ಯ ಅರ್ಜುನರಾವ್ ಹಿಷೋಪಕರ್ ಅವರು ಗುರುವಾರ ಅಂದರೆ ದಿನಾಂಕ 18–6–92ರಂದು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮಾನ್ಯ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿಕೊಡುತ್ತೇವೆ.

(ಉಪ ಚುನಾವಣೆಯಲ್ಲಿ ಆಯ್ಕೆಗೊಂಡಿದ್ದ ಮಾನ್ಯ ವೈ.ಕೆ. ರಾಮಯ್ಯ, ಮಾನ್ಯ ಬಿ.ಆರ್. ಪಾಟೀಲ್ ಹಾಗೂ ಮಾನ್ಯ ಅರ್ಜುನ್‌ರಾವ್ ಹಿಪ್ಪೋಪಕರ್ ಅವರನ್ನು ಸಭೆಗೆ ಪರಿಚಯಿಸಲಾಯಿತು)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲ್ಪಟ್ಟ ವಿಷಯ

ವಿಷಯ : ವಿಧಾನಸಭಾ ಅಧಿವೇಶನದ ಅವಧಿಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ತಾವು ಮುಂದಿನ ಕಾರ್ಯಕಲಾಪಗಳಿಗೆ ಹೋಗುವ ಮುಂಚೆ ನಾವು, ವಿರೋಧ ಪಕ್ಷದ ನಾಯಕರು ತಮಗೆ ಒಂದು ಸೂಚನೆ ಕಳುಹಿಸಿದ್ದೇವೆ. ಈ ಎರಡು ದಿನಗಳಿಗೆ ಮಾತ್ರ ವಿಧಾನ ಮಂಡಲದ ಅಧಿವೇಶನವನ್ನು ಕರೆಯುವ ಬದಲು ಕನಿಷ್ಠ 15 ದಿವಸಗಳಾದರೂ ಸದನವನ್ನು ಮುಂದುವರಿಸಬೇಕೆಂದು ನಾವುಗಳೆಲ್ಲಾ ನಿನ್ನೆ ದಿವಸ ರಾಜ್ಯಪಾಲರಿಗೆ ಮನವಿಯನ್ನು ಕೊಟ್ಟಿರುವುದು ಹಾಗೂ ತಮ್ಮನ್ನೂ ಸಹ ಭೇಟಿ ಮಾಡಿ ವಿಷಯವನ್ನು ತಿಳಿಸುವಂಥ ಪ್ರಯತ್ನ ಮಾಡಿದ್ದೇವೆ. ಅನೇಕ ಪ್ರಮುಖವಾದ ಸಾರ್ವಜನಿಕವಾಗಿ ಮಹತ್ವವುಳ್ಳ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದರೆ ಕೇವಲ ರಾಷ್ಟ್ರಪತಿಗಳ ಚುನಾವಣೆ ಹಿನ್ನೆಲೆಯಲ್ಲಿ ಔಪಚಾರಿಕವಾಗಿ ಈ ಅಧಿವೇಶನವನ್ನು ಕರೆಯಲಾಗಿದೆ. ಮಾನ್ಯ ಸಭಾ ನಾಯಕರು ಇಲ್ಲೇ ಇದ್ದಾರೆ. ಆದ್ದರಿಂದ, ನಾನು ಸರ್ಕಾರವನ್ನು ಕೇಳುವುದೇನೆಂದರೆ, ಅನೇಕ ಪ್ರಮುಖ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. 15–20 ದಿವಸಗಳ ಮಟ್ಟಿಗಾದರೂ ಅಧಿವೇಶನವನ್ನು ಕರೆಯಬೇಕಾಗಿತ್ತು. ಪ್ರಶ್ನೋತ್ತರ ವೇಳೆ ಇರಬೇಕಾಗಿತ್ತು. ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ನಾವು ಸರ್ಕಾರದಿಂದ ಉತ್ತರವನ್ನು ಪಡೆಯಬೇಕಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಧಾನ ಮಂಡಲದೊಳಗೆ ಸರಿಯಾದ ರೀತಿ ಚರ್ಚೆಯಾಗಬೇಕಾಗಿದೆ. ಕಾವೇರಿ ಜಲವಿವಾದದ ಬಗ್ಗೆ ಟ್ರಿಬ್ಯೂನಲ್‌ನಿಂದ ಸಂಪೂರ್ಣವಾಗಿ ನಮಗೆ ಅನ್ಯಾಯವಾಗಿದೆ. ಮುಂದೆ ನಮಗೆ ನ್ಯಾಯ ಸಿಗದಂಥ ಪರಿಸ್ಥಿತಿಯಾಗಿದೆ. ನಾವು ಈ ಬಗ್ಗೆ ಸಾಕಷ್ಟು ವಿಚಾರಗಳನ್ನು ಇಲ್ಲಿ ಇಡಬೇಕಾಗಿದೆ. ಅದೇ ರೀತಿ ಜೆಲ್ಲಾ ಪರಿಷತ್ತುಗಳಿಗೆ ಚುನಾವಣೆಗಳನ್ನು ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ.

ವಿ.ಸೂ : 10–7–92 : 12–05 (14) : ಪಿಆರ್:ಡಿಸಿ

ಅನೇಕ ಮೆಡಿಕಲ್ ಕಾಲೇಜುಗಳನ್ನು ತಾವು ಈಗಾಗಲೇ ತಮಗೆ ಬೇಕಾದವರಿಗೆ ಮಂಜೂರು ಮಾಡಿದ್ದೀರಿ. ಶಾಲೆಗಳಲ್ಲಿ ಶಿಕ್ಷಕರಿಲ್ಲ, ಶಾಲಾ ಪಠ್ಯಪುಸ್ತಕಗಳಿಲ್ಲ. ಮತ್ತೆ ಕುಡಿಗಲ್‌ನಲ್ಲಿ ಕೊಲೆ ಮೊಕದ್ದಮೆಯಲ್ಲಿ ಒಂದು ದೊಡ್ಡ ಹಗರಣವಾಗಿ ಇಡೀ ರಾಜ್ಯದ ಜನತೆ ಅತ್ತ ಕಡೆ ನೋಡುತ್ತಿದ್ದಾರೆ.

ಅಧ್ಯಕ್ಷರು : ಯಡಿಯೂರಪ್ಪನವರೇ, ನನ್ನ ಬೆಲ್ ಎಲ್ಲಿಯೂ ಕಾಣುತ್ತಿಲ್ಲ ಮೊದಲು ಬೆಲ್ ತರಿಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೋಸ್ಕರ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಭಾ ನಾಯಕರು ಅವಕಾಶ ಮಾಡಿಕೊಡಬೇಕು ಎನ್ನುವಂಥ ಒಂದು ಒತ್ತಾಯವನ್ನು ತರುವಂಥ ಪ್ರಯತ್ನ ಮಾಡುತ್ತಿದ್ದೇನೆ. ಸನ್ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮಲ್ಲಿ ಕನ್‌ವಿನ್ಸ್ ಮಾಡುವಂಥ ಪ್ರಯತ್ನ ಇಷ್ಟೇ. ತಾವು ಸಹ ನನ್ನ ಮಾತನ್ನು ಒಪ್ಪುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದಿದ್ದರೆ, ವಿರೋಧ ಪಕ್ಷದಲ್ಲಿದ್ದುಕೊಂಡು ಹೊರಗಡೆ ರಾಜ್ಯಪಾಲರ ಹತ್ತಿರ ಹೋಗಿ ಒತ್ತಾಯವನ್ನು ತಂದು ಇವೊತ್ತು ಒಳಗಡೆ ಬಂದು ಸುಮ್ಮನೆ ಕುಳಿತುಕೊಂಡರೆ ಜನರು ನಮ್ಮನ್ನು ಕ್ಷಮಿಸುವುದಿಲ್ಲ.

ಸಭಾಧ್ಯಕ್ಷರು : ಯಡಿಯೂರಪ್ಪನವರೇ, ನನಗೆ ಬೆಲ್ ಇಲ್ಲದಿದ್ದರೆ ನಾನು ನಿರಾಯುಧನಾಗಿ ಹೋಗುತ್ತೇನೆ. ಆದ ಕಾರಣ ಈಗ ಆಯುಧ.....

ಶ್ರೀ ವಾಟಾಳ್‌ನಾಗರಾಜ್ : ತಮಗೆ ನಾನು ಬೆಲ್ ಎಲ್ಲಿದೆಯೆಂದು ತೋರಿಸಿಕೊಟ್ಟಿದ್ದೇನೆ.